ತೊಡಗಿತ್ತು ಎಂದು, ವಜೀರಸಿಂಹ ಹೇಳತೊಡಗಿದ್ದನು. ಸುಬೇದಾರರು, ಲಹನಾಸಿಂಹನಿಂದ ಎಲ್ಲ ವಿಷಯ ಕೇಳಿ ಮತ್ತು ಕಾಗದ ಪತ್ರಗಳನ್ನು ಪಡೆದು ನೀನಿರದಿದ್ದಿದ್ದರೆ ಎಲ್ಲರೂ ಕೊಲ್ಲಲ್ಪಡುತ್ತಿದ್ದರು, ಎಂದು ಅವನ ತೀಕ್ಷ್ಣ ಬುದ್ಧಿಯನ್ನು ಪ್ರಶಂಸಿಸತೊಡಗಿದ್ದರು.

ಈ ಯುದ್ಧದ ಸದ್ದನ್ನು ಬಲಗಡೆಯ ಮೂರು ಮೈಲಿ ದೂರದ ಕಣಿವೆಯವರು ಕೇಳಿದ್ದರು. ಅವರು ಅನಂತರ ಟೆಲಿಫೋನ ಮಾಡಿದ್ದರು. ಅಲ್ಲಿಂದ ಘಟಾಘಟ ಡಾಕ್ಟರ ಮತ್ತು ರೋಗಿಗಳನ್ನು ಹೊತ್ತೊಯ್ಯುವ ಗಾಡಿಗಳು ಹೊರಟವು ಹಾಗೂ ಒಂದುವರೆ ಗಂಟೆಯಷ್ಟರೊಳಗೆ ಬಂದು ತಲುಪಿದವು. ಫೀಲ್ಡ್ ಆಸ್ಪತ್ರೆಯು ಸಮೀಪವಿತ್ತು. ನಾವು ಬೆಳಿಗ್ಗೆಯಾಗುವಷ್ಟರೊಳಗೆ ಅಲ್ಲಿ ಮುಟ್ಟುತ್ತಿದ್ದೆವು. ಆದ್ದರಿಂದ ಸಾಮಾನ್ಯ ಪಟ್ಟಿ ಕಟ್ಟಿ ಒಂದು ಗಾಡಿಯಲ್ಲಿ ಗಾಯಾಳುಗಳನ್ನು ಮಲಗಿಸಲಾಯಿತು ಮತ್ತೊಂದರಲ್ಲಿ ಶವಗಳನ್ನಿರಿಸಲಾಯಿತು. ಸುಬೇದಾರರು ಲಹನಾಸಿಂಹನ ತೊಡೆಗೆ ಪಟ್ಟಿ ಕಟ್ಟಲಿಚ್ಛಿಸಿದರು, ಆದರೆ ತುಸುವೆ ಗಾಯವಾಗಿದೆ, ಮುಂಜಾನೆ ನೋಡಿದರಾಯಿತು ಎಂದು ಹೇಳಿ ಅದನ್ನು ತಡೆದನು. ಬೋಧಾಸಿಂಹನು ಜ್ವರದಲ್ಲಿ ಬಡಬಡಿಸುತ್ತಿದ್ದನು. ಅವನನ್ನು ಗಾಡಿಯಲ್ಲಿ ಮಲಗಿಸಲಾಯಿತು. ಸುಬೇದಾರರು ಲಹನಾನ್ನು ಬಿಟ್ಟು ಹೋಗಲು ಸಿದ್ಧರಿರಲಿಲ್ಲ. ಇದನ್ನು ನೋಡಿ ಲಹನಾ ಹೇಳಿದನು_

'ನೀವು ಈ ಗಾಡಿಯಲ್ಲಿ ಹೋಗದಿದ್ದರೆ ನಿಮಗೆ ಬೋಧಾನ ಆಣೆ ಇದೆ ಮತ್ತು ಸುಬೇದಾರನಿಯವರ ಆಣೆಯಿದೆ.'

'ಮತ್ತೆ ನೀನು?'

'ಅಲ್ಲಿ ತಲುಪಿ ನನಗಾಗಿ ಗಾಡಿ ಕಳುಹಿಸಿಕೊಡಿ ಮತ್ತು ಜರ್ಮನಿಯರ ಶವಗಳಿಗಾಗಿಯೂ ಗಾಡಿಗಳು ಬರುತ್ತಿರಬಹುದು. ನನ್ನ ಸ್ಥಿತಿ ಗಂಭೀರವಾಗಿಲ್ಲ. ನೋಡುತ್ತಿಲ್ಲವೆ, ನಾನು ನಿಂತುಕೊಂಡಿದ್ದೇನೆ. ವಜೀರಸಿಂಹ ನನ್ನ ಬಳಿಯೇ ಇದ್ದಾನೆ.'

'ಸರಿ, ಆದರೆ...'

'ಬೋಧಾ ಗಾಡಿಯಲ್ಲಿ ಮಲಗಿದನು. ನೀವು ಹತ್ತಿರಿ. ಕೇಳಿ, ಸುಬೇದಾರನಿಯವರಿಗೆ ಕಾಗದ ಬರೆದರೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿ ಮತ್ತು ಮನೆಗೆ ಹೋದರೆ ಅವರು ನನಗೆ ಹೇಳಿದ್ದನ್ನು ನಾನು ಮಾಡಿದ್ದೇನೆ ಎಂದು ಹೇಳಿ.'

ಗಾಡಿಗಳು ಹೊರಟು ಬಿಟ್ಟಿದ್ದವು. ಸುಬೇದಾರರು ಗಾಡಿ ಹತ್ತುತ್ತ ಹತ್ತುತ್ತ ಲಹನಾನ ಕೈಹಿಡಿದು ಹೇಳಿದರು- 'ನೀನು, ನನ್ನ ಮತ್ತು ಬೋಧಾನ ಪ್ರಾಣ ಉಳಿಸಿದ್ದೀಯಾ. ಬರೆಯುವುದೇನು ಬಂತು, ಜೊತೆಗೆ ಹೋಗೋಣ. ನಿನ್ನ ಸುಬೇದಾರನಿಗೆ ನೀನೆ ಹೇಳುವಿಯಂತೆ. ಅವಳು ಏನು ಹೇಳಿದ್ದಳು?'

'ಈಗ ನೀವು ಗಾಡಿಯಲ್ಲಿ ಹತ್ತಿರಿ. ನಾನು ಹೇಳಿದ್ದನ್ನು ಬರೆಯಿರಿ ಮತ್ತು ಹೇಳಿ ಬಿಡಿ.' ಗಾಡಿ ಹೊರಟು ಹೋಗುತ್ತಲೇ ಲಹನಾ ಮಲಗಿಸಿಕೊಂಡನು. 'ವಜೀರಾ, ನೀರು ಕುಡಿಸು ಹಾಗೂ ನನ್ನ ಪಟ್ಟಿ ಬಿಚ್ಚು, ತೋಯುತ್ತಿದೆ.'

## 5

ಮೃತ್ಯುವಿಗಿಂತ ತುಸು ಮೊದಲು ಸ್ಮೃತಿ ಸ್ಪಷ್ಟವಾಗುತ್ತದೆ. ಜೀವನಪೂರ್ತಿಯ ಘಟನೆಗಳು ಒಂದೊಂದಾಗಿ ಕಣ್ಣ ಮುಂದೆ ಬರುತ್ತವೆ. ಸರಳ ಹೃದಯದ ಬಣ್ಣಗಳಿರುತ್ತವೆ, ಅವುಗಳ ಮೇಲಿಂದ ಸಮಯದ ಮಂಜು ಸರಿಯುತ್ತದೆ.

ಲಹನಾಸಿಂಹ ಹನ್ನೆರಡು ವರುಷದವನಿದ್ದಾನೆ. ಅಮೃತಸರದಲ್ಲಿ ತನ್ನ ಮಾಮಾನಲ್ಲಿಗೆ ಬಂದಿದ್ದಾನೆ ಮೊಸರಿನವನ ಬಳಿ, ತರಕಾರಿಯವನ ಬಳಿ, ಎಲ್ಲ ಕಡೆ, ಅವನಿಗೆ ಒಬ್ಬ ಎಂಟು ವರುಷದ ಹುಡುಗಿ ಸಿಗುತ್ತಾಳೆ. ಅವನು 'ನಿನ್ನ ನಿಶ್ಚಯವಾಯಿತೆ?' ಎಂದು ಕೇಳಿದಾಗ 'ಧತ್' ಎಂದು ಅವಳು ಓಡಿಹೋಗುತ್ತಾಳೆ. ಒಂದು ದಿನ ಅವನು ಹಾಗೇ ಕೇಳಿದಾಗ ಅವಳು ಹೇಳಿದಳು- ಹೌದು, ನಿನ್ನೆ ಆಯಿತು, ಈ ರೇಶಮಿ ಬುಟ್ಟೆಯ ಶಾಲು ಕಾಣಿಸುತ್ತಿಲ್ಲವೆ? ಇದನ್ನು ಕೇಳಿದೊಡನೆ ಲಹನಾಸಿಂಹನಿಗೆ ದುಃಖವಾಯಿತು, ಕೋಪ ಬಂದಿತು. 'ವಜೀರಸಿಂಹ ನೀರು ಕುಡಿಸು.'

ಎಪ್ಪತ್ತೈದು ವರ್ಷಗಳು ಗತಿಸಿದವು. ಲಹನಾಸಿಂಹ ನಂ.77 ರಾಯಿಫಲ್ಸನಲ್ಲಿ ಜಮಾದಾರನಾದನು. ಆ ಎಂಟು ವರ್ಷದ ಕನ್ಯೆಯ ಕುರಿತಾಗಿ ಗಮನವಿರಲಿಲ್ಲ. ಅವಳು ಎಂದಾದರು ಭೇಟಿಯಾಗಿದ್ದಳೊ ಇಲ್ಲವೊ ಎನ್ನುವದೂ ಗೊತ್ತಿಲ್ಲ. ಏಳು ದಿನಗಳ ರಜೆ ತೆಗೆದುಕೊಂಡು ಜಮೀನಿನ ಮುಕದ್ದಮೆಯನ್ನು ಮುಂದೆವರೆಸಲು ತನ್ನ ಮನೆಗೆ ಹೋದನು. ಅಲ್ಲಿ ಸೈನ್ಯ ಯುದ್ಧಕ್ಕೆ ಹೋಗುತ್ತಿದೆ, ಕೂಡಲೇ ಹೊರಟು ಬಾ, ಎಂದು ರೆಜಿಮೆಂಟಿನ ಆಫೀಸರನ ಕಾಗದ